ಇಂದು ದಿನಾಂಕಃ 21.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ 5 ರಿಂದ 9 ನೇದವರ ಪರ ಶ್ರೀ ಯು ಬಿ ಜೆ ವಕೀಲರಿಂದಃ

ನಾನು ಮತ್ತು ವಾದಿ 2 ಮತ್ತು 3 ರವರು ಹಾಗೂ 1 ರಿಂದ 5 ನೇ ಪ್ರತಿವಾದಿಯರು ಒಟ್ಟು ಕುಟಂಬದಲ್ಲಿ ನಾನು ಈಗ ಮದುವೆಯಾಗಿರುವ ಕಾರಣದಿಂದ ವಾಸವಾಗಿರುವುದಿಲ್ಲ ಎಂದರೆ ಸರಿ. ನನ್ನ ಮತ್ತು 3 ನೇ ವಾದಿಯ ಮದುವೆಯನ್ನು ನನ್ನ ತಂದೆಯೇ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ಮದುವೆ ಮಾಡುವಾಗ ನನ್ನ ತಂದೆ ಸಾಲ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಗೆ ಅಬಲೂರು ಮತ್ತು ಯತ್ತಿನಹಳ್ಳಿ ಎಂಬಲ್ಲಿ ಆಸ್ತಿಗಳು ಇರುತ್ತವೆ. ನನ್ನ ತಂದೆ ತೀರಿಕೊಂಡ ನಂತರ ನಾನು ಮತ್ತು ನನ್ನ ಅಣ್ಣಂದಿರು ಹಾಗೂ ಅಕ್ಕತಂಗಿಯರು ವಿಭಾಗವನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ಯತ್ತಿನಹಳ್ಳಿಯವರು ಎಂದರೆ ಸರಿ.

2. ನನ್ನ ತಂದೆ ದಾವಾ ಆಸ್ತಿಯ ಶೆಡ್ಯೂಲ್-6 ರಲ್ಲಿ ನಮೂದಿಸಿರುವ ಕ್ರಮ ಸಂಖ್ಯೆ 4 ನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ನನ್ನ ತಂದೆ ಮಾರಾಟದ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಕಾಲಕ್ಕೆ 7 ನೇ ಪ್ರತಿವಾದಿಯಿಂದ ನನ್ನ ತಂದೆ 70 ಸಾವಿರ ರೂಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಕರಾರಿನ ಅಡಿಯಲ್ಲಿ ಸದರಿ ಆಸ್ತಿಯ ಕಬ್ಜಾವನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 16-04-2003 ರಂದು ಪಂಚರ ಸಮಕ್ಷಮ ಮಾತುಕತೆಯಾಗಿರುತ್ತದೆ ಎಂದರೆ ಸರಿಯಲ್ಲ. ಅದರಂತೆ ದಿನಾಂಕ 08-05-2003 ರಂದು ಪಂಚರ ಸಮಕ್ಷಮದಲ್ಲಿ ಮಾರಾಟದ ಕರಾರನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

3. ನನ್ನ ತಂದೆ 2004 ರಲ್ಲಿ ತೀರಿಕೊಂಡಿರುತ್ತಾರೆ. ಆ ಕಾಲಕ್ಕೆ ಸದರಿ ಆಸ್ತಿಗೆ ಸಂಬಂದಿಸಿದಂತೆ 7 ನೇ ಪ್ರತಿವಾದಿಯರ ಹೆಸರಿಗೆ ಕಾಗದ ಪತ್ರಗಳನ್ನು ಮಾಡಿಕೊಡಬೇಕೆಂಬ ಒಲವು ಆತನಿಗೆ ಇತ್ತು ಎಂದರೆ ಸರಿಯಲ್ಲ. ಆದರೆ ಅವರು ಆ ರೀತಿ ಕಾಗದ ಪತ್ರಗಳನ್ನು ಸರಿಪಡಿಸಿಕೊಳ್ಳಲಿಲ್ಲ ಎಂದರೆ ಸರಿಯಲ್ಲ. ದಿನಾಂಕ 19-05-2005 ರಂದು ಆಸ್ತಿಗಳ ಹಂಚಿಕೆಯ ಬಗ್ಗೆ ಒಂದು ಕರಾರು ಪತ್ರವನ್ನು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆ ರೀತಿ ಮಾಡಿಕೊಂಡಂತಹ ಕರಾರಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ದಾಖಲೆಗೆ ನನ್ನ ತಾಯಿ, ನನ್ನ ಅಕ್ಕತಂಗಿಯರು ಹಾಗೂ ಅಣ್ಣ ತಮ್ಮಂದಿರು ಹಾಗೂ ಸಾಕ್ಷದಾರರು ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕರಾರುಪತ್ರದಲ್ಲಿ ಶೆಡ್ಯೂಲ್-ಎ ರಲ್ಲಿ ಇರುವ ಕ್ರಮ ಸಂಖ್ಯೆ 4 ರ ಆಸ್ತಿ ಹಾಗೂ ಉಳಿದ 19 ಗುಂಟೆ ಜಮೀನನ್ನು ಮಾರಾಟ ಮಾಡಿ ನಮ್ಮ ಮನೆಯ ಸಾಲವನ್ನು ತೀರಿಸಬೇಕೆಂದು ನಮೂದಿಸಲಾಗಿರುತ್ತದೆ ಎಂದರೆ

ಸುಳ್ಳು ಎಂದು ನುಡಿದಿರುತ್ತಾರೆ. ಸದರಿ ಕರಾರು ಪತ್ರದಲ್ಲಿ ಸರ್ವೆನಂ.149/5+6 , 34 ಗುಂಟೆ

ಹಾಗೂ ರಿ ಸ.ನಂ.148/2+3, 1 ಎಕರೆ 1 ಗುಂಟೆ ಜಮೀನುಗಳನ್ನು ನನಗೆ, ನನ್ನ ತಾಯಿಗೆ ಹಾಗೂ 3 ನೇ ವಾದಿಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ನನ್ನ ತಾಯಿ ಜೀವನಕಾಲದ ನಂತರ ನಾನು ಮತ್ತು ವಾದಿ 3 ರವರು ಸಮಾನಾಗಿ ಹಂಚಿಕೆ ಮಾಡಿಕೊಳ್ಳಬೇಕು ಎಂದು ನಮೂದಾಗಿರುತ್ತದೆ ಎಂದರೆ ಸರಿ. ಆ ರೀತಿ ನಮ್ಮ ಕುಟುಂಬದ ಆಸ್ತಿಗಳನ್ನು ಹಂಚಿಕೆ ಮಾಡಿಕೊಂಡು ಈ ಕರಾರನ್ನು ಮಾಡಿಕೊಳ್ಳಲಾಗಿರುತ್ತದೆ ಎಂದರೆ ಸಾಕ್ಷಿಯು ತಾತ್ಕಾಲಿಕವಾಗಿ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ತಂದೆ 7 ನೇ ಪ್ರತಿವಾದಿಗೆ ಮೇಲೆ ಹೇಳಿದ ಕ್ರಮ ಸಂಖ್ಯೆ 4 ರ ಜಮೀನು ಮಾರಾಟ ಮಾಡಿದ ಕಾರಾಣದಿಂದ ಸದರಿ ಆಸ್ತಿಯ ಬಗ್ಗೆ ಕರಾರಿನಲ್ಲಿ ನಮೂದಿಸಲಾಗಿರುತ್ತೆ ಎಂದರೆ ಸರಿಯಲ್ಲ.

4. ದಾವೆಯನ್ನು ಬರೆಯಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಾವು ತಾತ್ಕಾಲಿಕವಾಗಿ ಮಾಡಿಕೊಂಡಿರುವ ಕರಾರನ್ನು ನಾನು ನನ್ನ ವಕೀಲರಿಗೆ ನೀಡಿರುತ್ತೇನೆ. ಸದರಿ ಕರಾರು ಪತ್ರವನ್ನು ಈ ದಾವೆಯಲ್ಲಿ ಹಾಜರಪಡಿಸಿದ್ದೀರಾ? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಮೌನವಾಗಿರುತ್ತಾರೆ. ಸದರಿ ಕರಾರು ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರಪಡಿಸಲು ನನಗೆ ಯಾವುದೇ ತುಂದರೆ ಇರುವುದಿಲ್ಲ. ಆ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರಪಡಿಸುತ್ತೇನೆ.

(ಈ ಹಂತದಲ್ಲಿ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.